



ದುರಾಸೆಗಳ ಬಲೆಗೆ ಬೀಳದಂತೆ ರಕ್ಷಿಸಿ. 'ಅಬ್ದುಲ್ಲಾ' ಮತ್ತು 'ಹರಿಲಾಲ' ಎರಡು ಹೆಸರುಗಳ ಅರ್ಥ 'ದೇವರ ನಿಜವಾದ ಭಕ್ತ' ಎಂದಾಗುತ್ತದೆ. ಅವನು ಒಂದು ಹೆಸರಿನ ಜಾಗದಲ್ಲಿ ಬೇರೊಂದು ಹೆಸರನ್ನಿಟ್ಟುಕೊಂಡು ದೇವರ ಭಕ್ತನಾದರೆ, ಅವನು ಯಾವುದೇ ಹೆಸರನ್ನಿಟ್ಟುಕೊಂಡರೂ ನನಗೆ ಚಿಂತೆಯಿಲ್ಲ.'

ಬಾಪೂ ಅವರು ತಮ್ಮ ಹೃದಯದ ಭಾವನೆಗಳನ್ನು ಕೆಲವೇ ಶಬ್ದಗಳಲ್ಲಿ ವ್ಯಕ್ತ ಪಡಿಸಿದ ನಂತರ, ಏನೂ ಆಗದವರಂತೆ ಮತ್ತೆ ಸಾಮಾನ್ಯರಾದರು. ದೇಶದೆದುರು ಬಾಯಿ ತೆರೆದು ನಿಂತಿದ್ದ ನೂರಾರು ಪ್ರಶ್ನೆಗಳೆಡೆಗೆ ಅವರು ಈ ಮೊದಲಿನಂತೆಯೇ ಗಮನವನ್ನು ಹರಿಸಿದರು. ಮಹಾದೇವ ದೇಸಾಯಿಯವರು ಬಾಪೂ ಅವರ ಮುಖವನ್ನೇ ನೋಡುತ್ತಿದ್ದರು. ಆಗ ಬಾಪೂ ಅವರ ಮುಖದಲ್ಲಿ ವ್ಯಥೆಯ ಒಂದು ಚಿಕ್ಕ ರೇಖೆಯೂ ಇರಲಿಲ್ಲ.

***

ಜುಮಾ ಮಸೀದಿಯಿಂದ ಕೆಂಪು ತುರ್ಕಿ ಟೋಪಿಯನ್ನು ಧರಿಸಿದ್ದ ಅಬ್ದುಲ್ಲಾ ಗಾಂಧಿ ಹೊರಬಂದಾಗ ಅವನನ್ನು ಬಹಳಷ್ಟು ಮುಸ್ಲಿಮ್ ಸಂಗಡಿಗರು ಸುತ್ತುವರೆದಿದ್ದರು. ದೀರ್ಘ ಅವಧಿಯ ನಂತರ ವಿಚಿತ್ರ ಗೆಡ್ಡೆಯೊಂದು ಅವನ ಹೃದಯದಲ್ಲಿ ಮೂಡಿತ್ತು. ಅದು ಪರಿವಾರವನ್ನು, ವಿಶೇಷವಾಗಿ ಬಾಪೂ ಅವರನ್ನು ಸೋಲಿಸುವ, ತಾನು ಏನನ್ನಾದರೂ ಸಾಧಿಸುವ ಗೆಡ್ಡೆಯಾಗಿತ್ತು. ಅವನ ಹೆಜ್ಜೆಗಳು ಉತ್ಸಾಹದಿಂದ ಪುಟಿಯುತ್ತಿದ್ದವು. ಅದೆಷ್ಟೋ ವರ್ಷಗಳಿಂದ ಸೇಡನ್ನು ತೀರಿಸಿಕೊಂಡ ತೃಪ್ತಿ ಈಗ ಅವನಿಗೆ ಲಭಿಸಿತ್ತು. ಈ ತೃಪ್ತಿ, ಈ ಆನಂದ ಅವನ ಹಳೆಯ ಹಗಲು ಕನಸಾಗಿತ್ತು.

'ಮಿಯಾ ಅಬ್ದುಲ್ಲಾ!' ಜಕಾರಿಯಾ ಸಾಹೇಬರು ಹರಿಲಾಲನಿಗೆ ಭಾವೀ ಕಾರ್ಯಕ್ರಮದ ರೂಪುರೇಷೆಗಳನ್ನೂ ತಯಾರಿಸಿದ್ದರು, 'ಇಸ್ಲಾಮಿಗೆ ನಿಮ್ಮ ಆಗಮನ ಸಾಮಾನ್ಯ ಘಟನೆಯಲ್ಲ. ಧರ್ಮ ನಿಮ್ಮನ್ನು ಮೌಲ್ವಿಯಾಗಿ ಪರಿಗಣಿಸುವುದು. ದೇಶದ ಎಲ್ಲಾ ಮಸೀದಿಗಳಿಗೂ ಈಗ ನೀವು ಇಸ್ಲಾಮ್ ಪ್ರಚಾರಕ್ಕಾಗಿ ಒಂದು ಸುತ್ತು ಹೋಗಿ ಬನ್ನಿ. ಎಲ್ಲಾ ಸ್ಥಳಗಳಲ್ಲೂ ನಿಮ್ಮೆಲ್ಲಾ ಅಗತ್ಯಗಳನ್ನು ಪೂರೈಸುವಂತೆ ನಾನು ವ್ಯವಸ್ಥೆಯನ್ನು ಮಾಡಿದ್ದೇನೆ. ಅಲ್ಲಾಹ ನಿಮ್ಮೊಂದಿಗಿದ್ದಾರೆ.'

***

ಜಕಾರಿಯಾ ಅವರು ಸಿದ್ಧಪಡಿಸಿದ ಕಾರ್ಯಕ್ರಮಗಳಂತೆ ಹರಿಲಾಲ ಉತ್ಸಾಹದಿಂದ ದಕ್ಷಿಣ ಹಿಂದೂಸ್ತಾನದ ಪ್ರಯಾಣಕ್ಕೆ ಹೊರಟ. ಪ್ರಯಾಣದ ಮೊದಲ ಹಂತದಲ್ಲಿಯೇ ಹರಿಲಾಲ ಎರ್ನಾಕುಲಮ್‌ನ ಮಸೀದಿಯೊಂದರಲ್ಲಿ ನಮಾಜಿನ ನಂತರ ಭಾಷಣ ಮಾಡುವಾಗ, ಒಬ್ಬ 'ನವಜೀವನ'ದಲ್ಲಿ ಪ್ರಕಟಗೊಂಡಿದ್ದ ಬಾಪೂ ಅವರ ಲೇಖನದ ಬಗ್ಗೆ ಅವನ ಗಮನವನ್ನು ಸೆಳೆದ. ಹರಿಲಾಲ ಆ ಲೇಖನವನ್ನು ಓದಿದ. ಅವನು ಈ ಸಭೆಯಲ್ಲಿಯೇ ಆ ಲೇಖನಕ್ಕೆ ಉತ್ತರ ಕೊಡುವಂತೆ ಮಾತನಾಡಲು ಆರಂಭಿಸಿದ

'ಯಾವ ಹರಿಲಾಲನಿಗೆ ಬಾಪೂ ಅವರು ಇದನ್ನೆಲ್ಲಾ ಬರೆದಿರುವರೋ, ಆ ಹರಿಲಾಲ ಈಗ ನಾನಲ್ಲ. ನಾನು ಬನಿಯಾ (ವ್ಯಾಪಾರಿ) ಅಲ್ಲ. ನಾನು ಪಾಕ್ ಪರವರದಿಗಾರರ ಸಣ್ಣ ಭಕ್ತ. ಅಲ್ಲಾಹನನ್ನು ಹೊರತುಪಡಿಸಿ ನನಗೆ ಬೇರಾವ ಖುದಾ ಇಲ್ಲ...ಧರ್ಮವಿಲ್ಲ...'

ಪ್ರಾರ್ಥನೆಯ ನಂತರ ಅಲ್ಲಿ ಸೇರಿದ್ದ ಗುಂಪು ಅಬ್ದುಲ್ಲಾ ಗಾಂಧಿಗೆ ಜಯಕಾರ ಹಾಕಿತು. ಅಬ್ದುಲ್ಲಾ ಮತ್ತಷ್ಟು ಉಲ್ಲಾಸಿತನಾದ.

** *

ಜನಾಬ್ ಜಕಾರಿಯಾ ಸಾಹೇಬರು ಹರಿಲಾಲನ ಪ್ರಯಾಣಕ್ಕೆ ಮಾಡಿದ ವ್ಯವಸ್ಥೆಯಲ್ಲಿ ಯಾವುದೇ ಕೊರತೆಯಿರಲಿಲ್ಲ. ಸುಮಾರಾಗಿ ಎಲ್ಲಾ ಸ್ಥಳಗಳಲ್ಲಿಯೂ ಹರಿಲಾಲನ ಎಲ್ಲಾ ಅಭ್ಯಾಸಗಳ ಸಂತುಷ್ಟಿಗೆ ವ್ಯವಸ್ಥೆಯಾಗಿತ್ತು. ಅವನ ಆರ್ಥಿಕ ತೊಂದರೆಯಂತೂ ಆಗಲೇ ಕೊನೆಗೊಂಡಿತ್ತು. ಕೊಳಕುಹರಕು ಬಟ್ಟೆಗಳ ಜಾಗದಲ್ಲಿ ಈಗ ಇಸ್ತ್ರಿ ಮಾಡಲಾದ ಕೋಟುಪ್ಯಾಂಟು ಬಂದಿದ್ದವು. ಗಾಂಧಿ ಟೋಪಿಯ ಜಾಗದಲ್ಲಿ ಕೆಂಪು ತುರ್ಕಿ ಟೋಪಿ ಬಂದಿತ್ತು.

***

ಆದರೆ ಪ್ರಯಾಣದ ಮುಂದಿನ ಘಟ್ಟದಲ್ಲಿ ಹರಿಲಾಲನೊಂದಿಗೆ ಮದ್ರಾಸಿನಲ್ಲಿ ಅವಘಡವೊಂದು ಸಂಭವಿಸಿತು. ಮದ್ರಾಸಿನಲ್ಲಿ ಹರಿಲಾಲ ಉಳಿದುಕೊಳ್ಳಲು ಏರ್ಪಾಡಾಗಿದ್ದ ಮನೆ, ಮರ್ಯಾದಸ್ಥ ಹಾಗೂ ಜಮೀನುದಾರರ ಪರಿವಾರಕ್ಕೆ ಸೇರಿತ್ತು. ಮದ್ರಾಸಿನ ಮಸೀದಿಗೆ ಭಾಷಣ ಮಾಡಲು ಹೋಗುವುದಕ್ಕೆ ಮೊದಲು ಹರಿಲಾಲ ನಿಶ್ಶಂಕತ ಹೆಚ್ಚು ಮದ್ಯವನ್ನು ಸೇವಿಸಿದ್ದ. ಹರಿಲಾಲ ಮದ್ಯದ ಅಮಲಿನಲ್ಲಿ ಬಾಪೂ ಮತ್ತು ಹಿಂದೂ ಧರ್ಮದ ಮೇಲೆ ಬಹಿರಂಗವಾಗಿ ಆಕ್ರಮಣ ಮಾಡುವ ವಿಷಯ ಈಗ ಅವನ ಜೊತೆಗಾರರಿಗೆ ತಿಳಿದಿತ್ತು. ಆ ಆಕ್ರಮಣದ ಸುದ್ದಿಗಳು ಮರುದಿನದ ಪತ್ರಿಕೆಗಳನ್ನು ಪ್ರಕಟಗೊಂಡಿದ್ದನ್ನು ನೋಡಿದಾಗ ಅವರು ತುಂಬಾ ಉತ್ಸಾಹಿತರಾಗುತ್ತಿದ್ದರು.

ಅಂದು ಮದ್ರಾಸಿನಲ್ಲಿ ಹರಿಲಾಲ ಎಂದಿನಂತೆ ಸ್ಫೂರ್ತಿದಾಯಕ ಭಾಷಣವನ್ನು ಮಾಡಿದ. ಅಲ್ಲಿ ಅವನ ಭಾಷಣವನ್ನು ಕೇಳಲು ಹಾಗೂ ಕೇಳುವುದಕ್ಕಿಂತ ಅವನನ್ನು ನೋಡಲು ಜನರ ಗುಂಪು ಅತ್ಯಧಿಕ ಸಂಖ್ಯೆಯಲ್ಲಿ ಸೇರಿತ್ತು. ರಾತ್ರಿಯ ನಮಾಜಿನ ನಂತರ ತುಂಬಾ ಹೊತ್ತು ಹರಿಲಾಲ ತನ್ನ ಸಂಗಡಿಗರೊಂದಿಗೆ ಸುತ್ತುವರೆದಿದ್ದ. ಎಲ್ಲಾ ಕೆಲಸಗಳ ನಂತರ ಮತ್ತೊಮ್ಮೆ ಅವನು ಹೊರ ಬಂದು ಸಂಗಡಿಗರೊಂದಿಗೆ ಮದ್ಯವನ್ನು ಸೇವಿಸಿ, ತಡ ರಾತ್ರಿಯವರೆಗೂ ಸಂಗೀತನೃತ್ಯದಲ್ಲಿ ಮೈಮರೆತ.

ನಂತರ ಸ್ನೇಹಿತರು, ಸಂಗಡಿಗರಿಂದ ಬೀಳ್ಕೊಂಡು ಬಿಡಾರಕ್ಕೆ ಮರಳಿ ಬರುವಾಗ ತಡರಾತ್ರಿಯೂ ಮೀರಿತ್ತು. ಅವನ ಹೆಜ್ಜೆಗಳು ತಡಬಡಿಸುತ್ತಿದ್ದವು. ತಲೆ ಸುತ್ತುತ್ತಿತ್ತು, ಇಡೀ ಜಗತ್ತು ದುಂಡಾಗಿ ತಿರುಗುತ್ತಿದೆ ಎಂದು ಅನ್ನಿಸುತ್ತಿತ್ತು. ಇಂಥ ಸ್ಥಿತಿಯಲ್ಲಿ ಅವನಿಗೆ ಮನೆಯ ದಿಕ್ಕು ತಿಳಿಯುತ್ತಿರಲಿಲ್ಲ. ಸಾರ್ವಜನಿಕ ಸಾರಿಗೆ ಸುಮಾರಾಗಿ ನಿಂತಿತ್ತು.

ಹರಿಲಾಲ ಒಂದು ವಿದ್ಯುತ್ ಕಂಬದ ಆಸರೆ ಹಿಡಿದು ನಿಂತು ಗಟ್ಟಿಯಾಗಿ ಕಿರುಚಿದ, ' ಟ್ಯಾಕ್ಸಿವಾ ಲಾ ? . . . ಟ್ಯಾಕ್ಸಿವಾ ಲಾ ? . . . ವಿಕ್ಟೋರಿಯಾವಾಲಾ?' ಅವನ ಕೂಗು ಪ್ರತಿಧ್ವನಿಸಿ ಮರಳಿ ಬಂದವು. ಅವನ ಕಿರುಚಾಟ ಕೇಳಿ ಅಕ್ಕಪಕ್ಕದ ಮನೆಗಳಿಂದ ಅನೇಕ ಜನರು ಹೊರಗಿಣಿಕಿ ನೋಡಿದರು. ಮೊದಲು ಅವರ ಕಣ್ಣುಗಳಲ್ಲಿ ಕುತೂಹಲ, ನಂತರ ಭಯ ಆವರಿಸಿತು. ಹರಿಲಾಲನ ಕಿರುಚಾಟಚೀರಾಟ ಈಗ ನಿರಂತರವಾಗಿ ಸಾಗಿತ್ತು. ಅವನು ಕಂಬವನ್ನು ಅಪ್ಪಿಕೊಂಡು ಗಟ್ಟಿಯಾಗಿ ಕಿರುಚುತ್ತಲೇ ಇದ್ದ. ಅಷ್ಟರಲ್ಲಿ ಮನೆಗಳಿಂದ ಅನೇಕ ಜನ ಹೊರ ಬಂದಿದ್ದರು. ಕೆಲವು ಬಂಗ್ಲೆಗಳ ಕಾವಲುಗಾರರು ಬಂದು ಹರಿಲಾಲನನ್ನು ತಮ್ಮ ತೋಳುಗಳಿಂದ ಹಿಡಿದುಕೊಂಡರು.

'ನನ್ನನ್ನು ಹಿಡಿದುಕೊಳ್ಳಲು ನೀವ್ಯಾರು? ಹೋಗಿ ಹೋಗಿ, ಇಲ್ಲಿಂದ. ನಿಮ್ಮನ್ನು ನಾನು ಬಲ್ಲೆ... ನೀವು ಕಳ್ಳರು...ನನ್ನ ಶತ್ರುಗಳು...ಗೆಟ್ ಔಟ್... ಹೋಗಿ...ಹೋಗಿ...ಇಲ್ಲಿಂದ...' ಹರಿಲಾಲ ಅವರ ಹಿಡಿತದಿಂದ ತಪ್ಪಿಸಿಕೊಳ್ಳಲು ತನ್ನ ಶರೀರವನ್ನು ಕೊಡವಿದ. ದಣಿದ ಅವನ ದೇಹಕ್ಕೆ ಅವರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಜನ ಅವನನ್ನು ಬಲವಾಗಿ ಹಿಡಿದುಕೊಂಡರು. ಹರಿಲಾಲ ತಡಬಡಿಸುತ್ತಲೇ ಒಂದಿಬ್ಬರ ಮೇಲೆ ಕೈಮಾಡಿದ.

ಈ ನಡುವೆ ಒಬ್ಬರು ಪೊಲೀಸರಿಗೆ ಸುದ್ದಿಯನ್ನು ಮುಟ್ಟಿಸಿದರು. ಪೊಲೀಸರು ಅಲ್ಲಿಗೆ ಬಂದರು. ಹರಿಲಾಲ ಅಲ್ಲಿಯೇ ಕುಸಿದು ಮೂಟೆಯಂತೆ ಬಿದ್ದ. ಪೊಲೀಸರು ಅವನನ್ನು ಎತ್ತಿ ಜೀಪಿಗೆ ಹಾಕಿದರು. ಜೀಪು ಪೊಲೀಸ್ ಸ್ಟೇಷನ್ ಕಡೆಗೆ ಹೊರಟಿತು.

ಮರುದಿನ ಅವನ ಅಮಲು ಇಳಿದಾಗ ಪೊಲೀಸರು ಅವನನ್ನು ಸಾರ್ವಜನಿಕ ಸ್ಥಳದಲ್ಲಿ ಮದ್ಯವನ್ನು ಸೇವಿಸಿ ಅಸಭ್ಯವಾಗಿ ವ್ಯವಹರಿಸಿದ ಅಪರಾಧಕ್ಕೆ ನ್ಯಾಯಾಲಯದಲ್ಲಿ ಹಾಜರ್ ಪಡಿಸಿದರು. ನ್ಯಾಯಾಲಕ್ಕೆ ಬಂದಾಗ ಅವನ ಅಮಲು ಪೂರ್ಣವಾಗಿ ಇಳಿದಿತ್ತು. ಮ್ಯಾಜಿಸ್ಟ್ರೇಟರು ಹರಿಲಾಲನ ಬಗ್ಗೆ ಎಲ್ಲಾ ವಿವರಣೆಯನ್ನು ಪಡೆದು, ನಂತರ ಯೋಚಿಸಿ, ತಕ್ಷಣ ಅವನ ಅಪರಾಧಕ್ಕೆ ತೀರ್ಮಾನವನ್ನೂ ಪ್ರಕಟಿಸಿದರು

'ಹರಿಲಾಲ್ ಉರ್ಫ್ ಅಬ್ದುಲ್ಲಾ ಗಾಂಧಿಗೆ ಒಂದು ರೂಪಾಯಿ ಜುಲ್ಮಾನೆಯನ್ನು ವಿಧಿಸಿ, ಪೊಲೀಸರು ಅವನನ್ನು ಮುಕ್ತಗೊಳಿಸುವುದು.'

***

ಹರಿಲಾಲನ ಮತಾಂತರದಿಂದ ಬಾ ಅವರಿಗೆ ಅತ್ಯಂತ ದುಃಖವಾಗಿತ್ತು, ಈ ದುಃಖವನ್ನು ಅವರು ತುಟಿಗಳನ್ನು ಹೊಲಿದುಕೊಂಡು, ಎದೆಯ ಮೇಲೆ ಕಲ್ಲನ್ನಿಟ್ಟುಕೊಂಡು, ಒಳಗೊಳಗೇ ಅದುಮಿಟ್ಟುಕೊಂಡಿದ್ದರು. ಹರಿಲಾಲನ ಬಗ್ಗೆ ಬೇರೆಬೇರೆ ನಗರಗಳಲ್ಲಿ ದಿನನಿತ್ಯ ಲಭಿಸುತ್ತಿದ್ದ ಸುದ್ದಿಗಳನ್ನು ಕೇಳಿ ಅವರ ಕಿವಿಗಳಿಗೆ ಕಾದ ಎಣ್ಣೆಯನ್ನು ಹಾಕಿದಂತಾಗುತ್ತಿತ್ತು. ಅವರ ಹೃದಯ ಶೂನ್ಯವಾಗಿತ್ತು. ಬೆಳ್ಳಂಬೆಳಿಗ್ಗೆ ಬಾ ಅವರು ದೇವರ ಹೆಸರು ಹೇಳಿ ಏಳುವಾಗ, ಇಂದು ಪತ್ರಿಕೆಗಳಲ್ಲಿ ಹರಿಲಾಲನ ಬಗ್ಗೆ ಯಾವ ಹೊಸ ಸುದ್ದಿ ಪ್ರಕಟವಾಗಿದ್ದು ತಿಳಿಯುವುದೋ ಎಂದು